# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ–49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ.160) ರಲ್ಲಿ ದಿನಾಂಕ: 15.10.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ಅಕ್ಟೋಬರ್–2022 ಮಾಹೆಯ ಎರಡನೇ ಶನಿವಾರದ **ವಾರ್ಡ್** ಸಮಿತಿ ಸಭೆಯನ್ನು ದಿನಾಂಕ: 15.10.2022 ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- **ಐಡಿಯಲ್ ಹೋಮ್ಸ್ ಬಡಾವಣೆಯ ನಿವಾಸಿಯಾದ ಶ್ರೀಮತಿ ಸಾಧನ ರವರು ಈ ಕೆಳಕಂಡ ದೂರು/ಸಲಹೆ/ಅಹವಾಲುಗಳನ್ನು ಸಲ್ಲಿಸಿದರು.**

➢ ಹಿಂದಿನ ಸಭೆಯಲ್ಲಿ ನೀಡಿದ ಬೀದಿ ದೀಪ ನಿರ್ವಹಣೆಗೆ ಸಂಬಂಧಿಸಿದ ದೂರನ್ನು ಪರಿಹರಿಸಲಾಗಿರುವುದಕ್ಕೆ ಪಾಲಿಕೆಯ ವಿದ್ಯುತ್ ವಿಭಾಗದ ಅಧಿಕಾರಿಗಳಿಗೆ ಅಭಿನಂದನೆ ತಿಳಿಸಿದರು.

➢ ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್ ಬಡಾವಣೆಯ H–ರಸ್ತೆ, F–ರಸ್ತೆ, ಹಾಗೂ I–ರಸ್ತೆಗಳಲ್ಲಿ ವಿದ್ಯುತ್ ಕಂಬಗಳು ಇಲ್ಲದಿರುವ ಬಗ್ಗೆ ಪರಿಶೀಲಿಸಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿದರು. ಹೇಳಿದರು.

➢ ಐಡಿಯಲ್ ಹೋಮ್ಸ್ ಬಡಾವಣೆಯ 2ನೇ ಹಂತದಲ್ಲಿ ಬೀದಿ ದೀಪಗಳು ಇಲ್ಲದಿರುವ ಬಗ್ಗೆ ಪರಿಶೀಲಿಸಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕೋರಿದರು.

➢ ರಾಜರಾಜೇಶ್ವರಿನಗರದಲ್ಲಿ ಭಾರಿ ಮಳೆಯಿಂದಾಗಿ ಮೋರಿಗಳು(Drains) ತುಂಬಿ ರಸ್ತೆಗಳಿಗೆ ಹರಿದು ಮನೆಗಳಿಗೆ ನುಗ್ಗುತ್ತಿದ್ದು, ಚರಂಡಿಗಳ ಹೂಳನ್ನು ತೆರವುಗೊಳಿಸುವಂತೆ ಹಾಗೂ Shoulder drain ಸ್ವಚ್ಛಗೊಳಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಮಾನ್ಯ ಮುಖ್ಯ ಮಂತ್ರಿಗಳ ಅಮೃತ್ಥಾನ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು.

- ರಾಜರಾಜೇಶ್ವರಿನಗರ ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರು ನಿಲ್ಲುವುದರಿಂದ ಹಾಗೂ ಖಾಲಿ ನಿವೇಶನಗಲ್ಲಿ ಗಿಡಗಳು ಬೆಳೆದಿರುವುದರಿಂದ ಸೊಳ್ಳೆಗಳು ಜಾಸ್ತಿ ಆಗಿವೆ. ಆದುದರಿಂದ ಸೊಳ್ಳೆ ಔಷಧಿ ಸಿಂಪಡಿಸಲು ಕೋರಿದರು.
- ರಾಜರಾಜೇಶ್ವರಿನಗರದ ಕಾರ್ಪೋರೇಷನ್ ಬ್ಯಾಂಕ್ ರಸ್ತೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಶೀಘ್ರದಲ್ಲಿ ರಸ್ತೆ ಕಾಮಗಾರಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು.
- ನಾಮದಾರಿ ಸ್ಟೋರ್ ಹತ್ತಿರದಲ್ಲಿರುವ ಖಾಲಿ ನಿವೇಶನದಲ್ಲಿ ಜನರು ಕಸವನ್ನು ಸುರಿಯುತ್ತಿದ್ದಾರೆ ಹಾಗೂ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗದ ಮೇಲೆ ವ್ಯಾಪಾರ ನಡೆಸುತ್ತಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಆರೋಗ್ಯ ಪರಿವೀಕ್ಷಕರು ಪರಿಶೀಲನೆ ನಡೆಸುವುದಾಗಿ ತಿಳಿಸಿದರು.
- ಮರದ ಕೊಂಬೆಗಳು ರಸ್ತೆಯಲ್ಲಿ ಬಿದ್ದು ವಾಹನ ಸವಾರರಿಗೆ ಭಾರಿ ತೊಂದರೆಯುಂಟಾಗುತ್ತಿದೆ ಎಂದು ದೂರು ನೀಡಿದರು.
- BWSSB ವತಿಯಿಂದ ಎರಡು ದಿನಗಳಿಗೊಮ್ಮೆ ನೀರು ಪೂರೈಕೆ ಮಾಡುವಂತೆ ಕೋರಿಕೆ ಸಲ್ಲಿಸಿದ್ದರೂ ಇಲ್ಲಿಯವರೆಗೆ ಕ್ರಮ ವಹಿಸಿರುವುದಿಲ್ಲವೆಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಸದರಿ ಪ್ರಕ್ರಿಯೆಯು ಪೂರ್ಣಗೊಳಿಸಲು ಸುಮಾರು ಒಂದು ವರ್ಷವಾಗುವುದೆಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ತುಂಬಾ ರಸ್ತೆ ಗುಂಡಿಗಳಿದ್ದು ಅದನ್ನು ಆದಷ್ಟು ಬೇಗಾ ಮುಚ್ಚಬೇಕೆಂದು ಕೋರಿದರು.
- ಒಣ ತ್ಯಾಜ್ಯ (Dry Waste) ವಿಲೇವಾರಿ ಸಮಸ್ಯೆ ಬಗೆಹರಿಯುತ್ತಿಲ್ಲವೆಂದು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಶೀಘ್ರದಲ್ಲಿ ಸಮಸ್ಯೆ ಬಗೆಹರಿಯುತ್ತದೆ ಎಂದು ತಿಳಿಸಿದರು.
- ಬಿಇಎಂಎಲ್ 5ನೇ ಹಂತದ ನಿವಾಸಿಯಾದ ಶಿವಾಜಿ ರಾವ್ ರವರು Airtel Office ಹತ್ತಿರ ಚರಂಡಿ (Drain) ಅಭಿವೃದ್ಧಿಪಡಿಸಲು ಕೋರಿದರು.

- **ಬಿಇಎಂಎಲ್ ಬಡಾವಣೆಯ ನಿವಾಸಿಯಾದ ಶ್ರೀಮತಿ ಸವಿತಾ ರವರು ಈ ಕೆಳಕಂಡ ದೂರು/ಸಲಹೆ/ಅಹವಾಲುಗಳನ್ನು ಸಲ್ಲಿಸಿದರು.**

- ವಾರ್ಡ್ ವ್ಯಾಪ್ತಿಯಲ್ಲಿ ಭಾರಿ ಮಳೆಯಿಂದ ತೊಂದರೆಯುಂಟಾದಾಗ ಏನೇನು ತುರ್ತು ಸೇವೆಗಳು ಇವೆ ಹಾಗೂ ತುರ್ತು ಸೇವೆ ಅವಶ್ಯಕತರಯಿದ್ದಲ್ಲಿ ಯಾರನ್ನು ಸಂಪರ್ಕಿಸಬೇಕು ಎಂದು ಕೇಳಿದರು, ಅದಕ್ಕೆ ಕಿರಿಯ ಅಭಿಯಂತರರಾದ ಶ್ರೀ.ಸಿದ್ದರಾಮಯ್ಯ ನವರು ವಲಯ ಮಟ್ಟದ CONTROL ROOM ನ ಸಂಪರ್ಕ ಸಂಖ್ಯೆಗೆ ಅಥವಾ ವಾರ್ಡ್ ಅಭಿಯಂತರರಿಗೆ ಕರೆ ಮಾಡಲು ತಿಳಿಸಿದರು
- ಕೆಂಪೇಗೌಡ ಜೋಡಿ ರಸ್ತೆಯಲ್ಲಿ ವಿದ್ಯುತ್ ದೀಪಗಳು ಬೆಳಗುತ್ತಿಲ್ಲವೆಂದು ಕಳೆದ ಸಭೆಗಳಲ್ಲಿ ದೂರು ನೀಡಿದ್ದರೂ ಪರಿಹರಿಸಿರುವುದಿಲ್ಲವೆಂದು ಮತ್ತೊಮ್ಮೆ ದೂರು ನೀಡಿದರು.
- ಕಾಫಿ ಕಟ್ಟೆಯ ಸುತ್ತಮುತ್ತ ಚರಂಡಿಗಳೆಲ್ಲ ಮಳೆಯಿಂದಾಗಿ ತುಂಬಿ ಉಕ್ಕಿ ಹರಿಯುತ್ತಿದೆ, ವಾರ್ಡ್ ಅಭಿಯಂತರರು ಪರಿಶೀಲಿಸಿ ಹೂಳು ತೆರವುಗೊಳಿಸುವಂತೆ ಕೋರಿದರು.
- ರಸ್ತೆ ಬದಿ ವ್ಯಾಪಾರಿಗಳು ಪ್ಲಾಸ್ಟಿಕ್ ಕವರ್ ಗಳನ್ನು ಬಳಸುತ್ತಿದ್ದಾರೆ, ಪ್ಲಾಸ್ಟಿಕ್ ಕವರ್ ಗಳ ಬದಲಿಗೆ ಬಟ್ಟೆ ಬ್ಯಾಗ್ ಬಳಸಲು ಸೂಚಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- ಬಿಇಎಂಎಲ್ 5ನೇ ಹಂತದಲ್ಲಿ ರಸ್ತೆ ಕುಸಿದಿದ್ದು, ಸ್ಥಳ ಪರಿಶೀಲಿಸಿ ತುರ್ತು ಕ್ರಮ ವಹಿಸುವಂತೆ ಕೋರಿದರು.
- ಮುಂದಿನ ಸಭೆಗೆ ತೋಟಗಾರಿಗೆ, ಅರಣ್ಯ ವಿಭಾಗ, ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಕಡ್ಡಾಯವಾಗಿ ಆಹ್ವಾನಿಸುವಂತೆ ಕೋರಿದರು.
- ಶ್ರೀ.ಶಿವಲಿಂಗಯ್ಯನವರು ಆದಿತ್ಯ ಲೇಔಟ್ ನಲ್ಲಿ ಚರಂಡಿ (Drain) ಅಭಿವೃದ್ಧಿಪಡಿಸುವಂತೆ ಕೋರಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-49

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.